**ಅಸಲು ದಾವಾ ಸಂಖ್ಯೆ-221/2018** **ಪಿ.ಡಬ್ಲ್ಯೂ:- 1**

ದಿನಾಂಕಃ **07-02-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-

ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ಸಂಬಂಧಪಟ್ಟ ಸಕ್ಷಮ ಪ್ರಾಧೀಕಾರದಿಂದ ಪಡೆದುಕೊಂಡಿರುವ ಬಗ್ಗೆ ನನಗೆ ನೆನಪಿಲ್ಲ. ಪ್ರತಿವಾದಿ 3 ರಿಂದ 5 ನನ್ನ ಅಜ್ಜ ವೀರಪ್ಪನ ಹೆಣ್ಣು ಮಕ್ಕಳು ಎಂದರೆ ಸರಿ. 1 ನೇ ವಾದಿಗೆ 3 ನೇ ಪ್ರತಿವಾದಿ ಅಕ್ಕರಾಗಬೇಕು. ಪ್ರತಿವಾದಿ 4 ಮತ್ತು 5 ರವರು ತಂಗಿಯರಾಗಬೇಕು. ಪ್ರತಿವಾದಿ 3 ರಿಂದ 5 ರವರು ಸಹ ದಾವಾ ಆಸ್ತಿಗಳಲ್ಲಿ ಭಾಗಾಂಶದ ಹಕ್ಕು ಇರುತ್ತದೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಮ್ಮ ತಾಯಿಯವರು ಪ್ರತಿವಾದಿ 3 ರಿಂದ 5 ರವರನ್ನು ಸಲ್ಲಿಸಲು ಕರೆದಿದ್ದರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ ಖಂಡಿಕೆಗಳಲ್ಲಿ ಪ್ರತಿವಾದಿ 3 ರಿಂದ 5 ರವರು ವೀರಪ್ಪನ ಹೆಣ್ಣು ಮಕ್ಕಳು ಎಂಬುದರ ಬಗ್ಗೆ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಮ್ಮ ತಾಯಿಯವರು ವಕೀಲರಿಗೆ ಮಾಹಿತಿಯನ್ನು ಕೊಡುವ ಸಮಯದಲ್ಲಿ ನಾನು ಸಹ ಹಾಜರಿದ್ದೆನು. ನಿಪಿ-10 ಮುಟೇಷನ್ ದಾಖಲೆಯು ನನ್ನ ಅಜ್ಜ ಮತ್ತು ಅವರ ಕುಟುಂಬದ ಸದಸ್ಯರು ಕುಟುಂಬದ ಆಸ್ತಿಗಳನ್ನು ಜುಬಾನಿ ಹಿಸ್ಸೆ ಮಾಡಿಕೊಂಡ ಬಗ್ಗೆ ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ-10 ದಾಖಲೆಯನ್ನು ನಮ್ಮ ಅಜ್ಜನ ಅಣ್ಣ ತಮ್ಮಂದಿರು ಸೃಷ್ಟಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 2 ರವರು ನಮ್ಮ ಅಜ್ಜನ ಜೊತೆಯಲ್ಲಿ ಆಸ್ತಿಗಳನ್ನು ಜುಬಾನಿ ಹಿಸ್ಸೆ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ಮುಟೇಷನ್ ದಾಖಲೆಯಲ್ಲಿ ಸರ್ವೇ ನಂ.18, 19 ಮತ್ತು 32 ರಲ್ಲಿ ವೀರಪ್ಪರವರಿಗೆ ಆಸ್ತಿಯನ್ನು ಹಂಚಿಕೊಟ್ಟ ಬಗ್ಗೆ

ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-11 ವಿಭಾಗ ಪತ್ರವನ್ನು 1 ಮತ್ತು 2 ನೇ ಪ್ರತಿವಾದಿ, ರುದ್ರೇಶಪ್ಪ, ನಂಜುಂಡಪ್ಪ ಬಿನ್ ಮಹದೇವಪ್ಪರವರು ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-11 ದಾಖಲೆಯನ್ನು ಯಾರು ಯಾರಿಂದ ಪಡೆದುಕೊಂಡಿದ್ದಾರೆ ಮತ್ತು ಯಾರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-11 ರ ಪ್ರಕಾರ ನಂಜುಂಡಪ್ಪ ಬಿನ್ ಮಹದೇವಪ್ಪ, ರುದ್ರೇಶಪ್ಪ ಬಿನ್ ಚನ್ನವೀರಪ್ಪ ಅವರಿಗೆ ಸೇರ ತಕ್ಕಂತಹ ಆಸ್ತಿಗಳನ್ನು ನನ್ನ ಅಜ್ಜ ತೀರಿಕೊಂಡ ನಂತರ 1 ಮತ್ತು 2 ನೇ ಪ್ರತಿವಾದಿಗಳು ಅವರ ಹಿಸ್ಸೆಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಮತ್ತು ಅವರ ತಂದೆ 1995-96 ನೇ ಸಾಲಿನಿಂದ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿದ್ದರಿಂದ ವಾದಿ ಮತ್ತು ಪ್ರತಿವಾದಿ 3 ರಿಂದ 5 ರವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-11 ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಪೂರ್ವದಲ್ಲಿ ನೋಡಿದ್ದೇನು. ನಂಜುಂಡಪ್ಪ ಬಿನ್ ಮಹದೇವಪ್ಪ, ರುದ್ರೇಶಪ್ಪ ಬಿನ್ ಚನ್ನವೀರಪ್ಪರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಮಾಡಬೇಕಾಗಿತ್ತು ಆದರೆ ಮಾಡಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಪಿ-11 ದಾಖಲೆಯನ್ನು ನಮ್ಮ ವಕೀಲರಿಗೆ ನಾನು ಕೊಟ್ಟಿದ್ದೆನು. ನಿಪಿ-10 ರ ಮುಟೇಷನ್ ದಾಖಲೆಯಂತೆ 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಭಾಗಾಂಶಕ್ಕೆ ಬಂದಂತಹ ಆಸ್ತಿಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಕಂಕನಹಳ್ಳಿ ಗ್ರಾಮದಲ್ಲಿ 1 ಎಕರೆ ಜಮೀನಿಗೆ ಮಾರುಕಟ್ಟೆ ಬೆಲೆ ಎಷ್ಟು ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಕಂಕನಹಳ್ಳಿ ಗ್ರಾಮದಲ್ಲಿರುವ ಪ್ರತಿ ಎಕರೆಗೆ 5-6 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.10 ಮತ್ತು 11 ರ ಆಸ್ತಿಗಳು ಎಷ್ಟು ಬೆಲೆ ಬಾಳುತ್ತದೆ ಎಂದರೆ ಸಾಕ್ಷಿಯು 25 ರಿಂದ 30 ಲಕ್ಷ ಬೆಲೆ ಬಾಳುತ್ತವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರಿಂದ 11 ಆಸ್ತಿಗಳು ಒಟ್ಟು ಮಾರುಕಟ್ಟೆಯ

ಬೆಲೆಯು 1 ½ ಕೋಟಿ ಆಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ ನಂ.1 ರಿಂದ 11 ಆಸ್ತಿಗಳ ಈಗಿನ ಮಾರುಕಟ್ಟೆ ಬೆಲೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗಳ ಮಾರುಕಟ್ಟೆ ಬೆಲೆ ಎಷ್ಟು ಎಂದು ವಕೀಲರಿಗೆ ತಿಳಿಸಿರುವುದಿಲ್ಲ. ಸಾಕ್ಷಿಗೆ ನಿಮ್ಮ ತಾಯಿಗೆ ಒಟ್ಟು ಕುಟುಂಬದ ಪರವಾಗಿ 1/6 ಭಾಗಾಂಶ ಬಂದರೆ ಸದರಿ ಆಸ್ತಿಗಳ ಮಾರುಕಟ್ಟೆ ಮೌಲ್ಯ 15 ಲಕ್ಷ ಆಗುತ್ತದೆ ಎಂದರೆ ಸಾಕ್ಷಿಯು ಅದಕ್ಕಿಂತ ಜಾಸ್ತಿ ಆಗುತ್ತದೆ ಎಂದು ನುಡಿಯುತ್ತಾರೆ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.